**ದಿನಾಂಕ ಃ 05.03.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟಿಸವಾಲು ಃ ಶ್ರೀ ಸಿ ಎಂ ಜಿ ವಕೀಲರಿಂದ ಃ**

ನಾನು ಎಸ್.ಎಸ್.ಎಲ್.ಸಿ.ವರೆಗೆ ಓದಿರುತ್ತೇನೆ. ದಿನಾಂಕ ಃ 26.09.1962 ರಿಂದ ನಮ್ಮ ಕುಟುಂಬದಲ್ಲಿ ನಡೆದಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ. 26.09.1962 ರಂದು ನಮ್ಮ ಕುಟುಂಬದಲ್ಲಿ ನೊಂದಾಯಿತ ವಿಭಾಗ ಪತ್ರ ಆಗಿರುತ್ತದೆ. ಸದರಿ ವಿಭಾಗದ ಪತ್ರದಲ್ಲಿ ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಿ ವಿಭಾಗ ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸಾಕ್ಷಿಯು ಕೆಲವು ಆಸ್ತಿಗಳನ್ನು ಬಿಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಯಾವ ಯಾವ ಆಸ್ತಿಗಳನ್ನು ವಿಭಾಗ ಪತ್ರಗಳಲ್ಲಿ ಬಿಡಲಾಗಿರುತ್ತದೆ ಎಂದರೆ, ಸಾಕ್ಷಿಯು ದಾಖಲೆಗಳನ್ನು ನೋಡಿ ಹೇಳುವುದಾಗಿ ಸಾಕ್ಷಿಯು ನುಡಿದಿರುತ್ತಾರೆ. ಈ ಕೇಸನ್ನು 174/3 ರ ಸರ್ವೇ ನಂಬರ್ ಸಂಬಂಧಪಟ್ಟಂತೆ ಹಾಕಿರುತ್ತೇನೆ. ದಾವಾ ಸ್ವತ್ತನ್ನು 1962 ನೇ ಇಸವಿಯಲ್ಲಿ ಆದ ವಿಭಾಗ ಪತ್ರದಲ್ಲಿ ಸೇರಿಸಿರಲಿಲ್ಲ. ನನ್ನ ಅಜ್ಜಿ ತಾಯಮ್ಮನಿಗೆ 1962 ರಲ್ಲಿ ಆದ ವಿಭಾಗದಲ್ಲಿ ಯಾವ ಯಾವ ಆಸ್ತಿಗಳು ಅವರ ಭಾಗಕ್ಕೆ ಬಂದಿರುತ್ತದೆ ಎಂಬುದನ್ನು ನಾನು ದಾಖಲೆಯನ್ನು ನೋಡಿ ಹೇಳುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

1962ರ ವಿಭಾಗ ಪತ್ರದಂತೆ ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಅವರವರೇ ಸ್ವಾಧೀನಾನುಭವದಲ್ಲಿದ್ದುಕೊಂಡು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿಯು ವಿಭಾಗ ಪತ್ರವನ್ನು ನೋಡಿ ಆ ಬಗ್ಗೆ ಸಾಕ್ಷಿನುಡಿಯುವುದಾಗಿ ಸಾಕ್ಷಿಯು ಹೇಳುತ್ತಾರೆ. ನಿ.ಪಿ.7, ದಿಃ26.09.1962ರ ವಿಭಾಗ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ.7 ವಿಭಾಗ ಪತ್ರದಂತೆ ವಿಭಾಗ ಪತ್ರದಲ್ಲಿ ನಮೂದಿಸಿರುವ ಎಫ್ ಶೆಡ್ಯೂಲ್ ಸ್ವತ್ತುಗಳು ನನ್ನ ಅಜ್ಜಿ ತಾಯಮ್ಮನವರ ಭಾಗಕ್ಕೆ ಬರೆದಿರುತ್ತವೆ ಎಂದರೆ ಸಾಕ್ಷಿಯು ವಿಭಾಗ ಪತ್ರದಲ್ಲಿ ಆ ರೀತಿಯಾಗಿ ಬರೆದಿರಬಹುದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಎಫ್ ಶೆಡ್ಯೂಲ್ ಸ್ವತ್ತುಗಳನ್ನು ನನ್ನ ಅಜ್ಜಿ ತಾಯಮ್ಮನವರ ಭಾಗಕ್ಕೆ ಬರೆದುಕೊಡಲಾಗಿರುತ್ತದೆ, ಆದರೆ ಸದರಿ ಆಸ್ತಿಗಳು ಯಾವ ಆಸ್ತಿಗಳು ಆಗಿರುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ವಿಭಾಗ ಪತ್ರದಂತೆ ಎಫ್ ಶೆಡ್ಯೂಲ್ ಸ್ವತ್ತುಗಳನ್ನು ನನ್ನ ಅಜ್ಜಿಯು ಅವರು ಬದುಕಿರುವವರೆಗೆ ಅನುಭವಿಸಬಹುದು, ನಂತರ ಸದರಿ ಸ್ವತ್ತುಗಳು ಅವರ ಐದು ಜನ ಮಕ್ಕಳಿಗೆ ಹೋಗುತ್ತದೆಂದು ನನ್ನ ವಕೀಲರಿಗೆ ಈ ದಾವೆಯನ್ನು ಹಾಕುವ ಸಮಯದಲ್ಲಿ ಹೇಳಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ವಿಭಾಗ ಪತ್ರದಲ್ಲಿ ಎಫ್ ಶೆಡ್ಯೂಲ್ ಸ್ವತ್ತುಗಳನ್ನು ನನ್ನ ಅಜ್ಜಿಯು ಅವರು ಬದುಕಿರುವವರೆಗೆ

ಅನುಭವಿಸಬಹುದು, ನಂತರ ಸದರಿ ಸ್ವತ್ತುಗಳು ಅವರ ಐದು ಜನ ಮಕ್ಕಳಿಗೆ ಹೋಗುತ್ತದೆಂದು ನಮೂದಿಸಲಾಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ವಿಭಾಗ ಪತ್ರವನ್ನು ಈ ಕೇಸಿನಲ್ಲಿ ಪ್ರಶ್ನಿಸಿರುತ್ತೇನೆ. ನಿ.ಪಿ.7 ರ ಎಫ್ ಶೆಡ್ಯೂಲ್ ಸ್ವತ್ತುಗಳೆಲ್ಲವನ್ನು ಈ ಕೇಸಿನಲ್ಲಿ ಸೇರಿಸಿರುವುದಿಲ್ಲ. 1978 ರಲ್ಲಿ ನನ್ನ ಅಜ್ಜಿ ತಾಯಮ್ಮ ಮೃತಪಟ್ಟಿರುತ್ತಾರೆ. 1978 ರಿಂದ 2012 ರವರೆಗೂ ನಿ.ಪಿ.7 ರ ಎಫ್ ಶೆಡ್ಯೂಲ್ ಸ್ವತ್ತುಗಳ ಮೇಲೆ ಎಲ್ಲರಿಗೂ ಹಕ್ಕು ಇರುತ್ತದೆ ಎಂದು ಭಾಗ ಬರಬೇಕೆಂದು ಕೇಳಿರುತ್ತೀರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2011 ನೇ ಇಸವಿಯಲ್ಲಿ ತಾನು ಕೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. 2011 ರಲ್ಲಿ ನಾನು ಬಾಬು ರೆಡ್ಡಿಯವರನ್ನು ಕೇಳಿರುತ್ತೇನೆ. ನೋಟಿಸಿನಲ್ಲಿ ನಾನು ದಾವಾ ಸ್ವತ್ತು ತಾಯಮ್ಮನವರ ಭಾಗಕ್ಕೆ ಬಂದಿರುತ್ತದೆ, ತಾಯಮ್ಮ ಮೃತಪಟ್ಟ ನಂತರ ದಾವಾ ಸ್ವತ್ತು ತಾಯಮ್ಮನ ಎಲ್ಲ ವಾರಸುದಾರರಿಗೆ ಸೇರುತ್ತದೆ ಎಂದು ತಿಳಿಸಿರುತ್ತೇನೋ ಇಲ್ಲವೋ ಗೊತ್ತಿಲ್ಲ. 1978 ನೇ ಇಸವಿಯಿಂದ 2010 ರ ವರೆಗೊ ನಾನು ರೆವೆನ್ಯೂ ದಾಖಲೆಗಳನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರಶ್ನಿಸಿರುವುದಿಲ್ಲ. ನನ್ನ ತಂದೆ 2000 ಇಸವಿಯಲ್ಲಿ ಮೃತಪಟ್ಟಿರುತ್ತಾರೆ. ನನ್ನ ಮೃತಪಟ್ಟನಂತರ ದಾವಾ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಡಬೇಕೆಂದು ಅರ್ಜಿಯನ್ನು ಕೊಟ್ಟಿರುವುದಿಲ್ಲ. ದಾವಾ ಸ್ವತ್ತನ್ನು ಬಿಟ್ಟು

ಉಳಿದ ಎಫ್ ಶೆಡ್ಯೂಲ್ ಸ್ವತ್ತುಗಳನ್ನು ಈ ಕೇಸಿನಲ್ಲಿ ಏಕೆ ಸೇರಿಸಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆಧಾರ ಸಿಕ್ಕಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ದಾವೆಯನ್ನು ಹಾಕಿದ ನಂತರ ನಾನು ಓ.ಎಸ್. 25584/14 ನಲ್ಲಿ ದಾವೆಯನ್ನು ವಿಭಾಗ ಕೋರಿ ಮೆಯೋಹಾಲ್ ನ್ಯಾಯಾಲಯದಲ್ಲಿ ಬಾಬುರೆಡ್ಡಿಯವರ ವಿರುದ್ದ ಹಾಕಿರುತ್ತೇನೆ ಎಂದರೆ ಸರಿ. 11 ನೇ ಪ್ರತಿವಾದಿಯ ವಿರುದ್ಧ ನನಗೆ ದಾವಾ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಹಾಕಿರುತ್ತೇನೆ. 11 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಅಪಾರ್ಟ್ ಮೆಂಟನ್ನು ಕಟ್ಟಿರುತ್ತಾರೆ. ಇಲ್ಲಿಗೆ 8 ವರ್ಷದ ಹಿಂದೆ 11 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಅಪಾರ್ಟ್ ಮೆಂಟನ್ನು ಕಟ್ಟಿರುತ್ತಾರೆ. 11 ನೇ ಪ್ರತಿವಾದಿಯು ಅಪಾರ್ಟ್ ಮೆಂಟನ್ನು ಕಟ್ಟಿದ ನಂತರ ಹಲವಾರು ಜನರಿಗೆ ಮಾರಾಟ ಮಾಡಿರುತ್ತಾರೆ. 11 ನೇ ಪ್ರತಿವಾದಿ ವೈಯುಕ್ತ ಆಧಾರದ ಮೇರೆಗೆ ಅಪಾರ್ಟ್ ಮೆಂಟನ್ನು ಕಟ್ಟಿರುವುಲ್ಲ ಅಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ಹಾಗೂ 11 ನೇ ಪ್ರತಿವಾದಿಯು ಸೇರಿ ಜಾಯಿಂಟ್ ಡೆವಲಪ್‌ಮೆಂಟ್ ಅಗ್ರಿಮೆಂಟನ್ನು ಮಾಡಿಕೊಂಡು ಅಪಾರ್ಟ್ ಮೆಂಟನ್ನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.10 ನ್ನು ನಮ್ಮ ವಕೀಲರು ತಂದು ಕೊಟ್ಟಿರುತ್ತಾರೆ. ನಿ.ಪಿ.10 ರಲ್ಲಿ ಏನು ಬರೆದಿದೆಯೋ ನನಗೆ ಗೊತ್ತಿಲ್ಲ.

ನಿ.ಪಿ.10 ರಿಂದ ನಿ.ಪಿ.12 ರಲ್ಲಿ ಕಂಪನಿಯ ಬಗ್ಗೆ ನಮೂದಿಸಿರುವುದು ಗೊತ್ತಿದ್ದರೂ ಸಹ ಅದನ್ನು ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಇಬ್ಬರು ಸಹೋದರಿಯರು ಇರುತ್ತಾರೆ. ಅವರ ಹೆಸರು ರತ್ನಮ್ಮ ಹಾಗೂ ಕಲ್ಯಾಣಮ್ಮ ಆಗಿರುತ್ತದೆ. ರತ್ನಮ್ಮಅವರಿಗೆ ಇಬ್ಬರು ವಾರಸುದಾರರು ಇರುತ್ತಾರೆ. ಅವರು ಬಾಲಕೃಷ್ಣ ರೆಡ್ಡಿ ಹಾಗೂ ಸೀನಪ್ಪ ರೆಡ್ಡಿ ಆಗಿದ್ದು, ಸೀನಪ್ಪರೆಡ್ಡಿ ಮೃತಪಟ್ಟಿರುತ್ತಾರೆ. ಕಲ್ಯಾಣಮ್ಮ ಅವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಸುಂದರ ರಾಮರೆಡ್ಡಿಯವರು ಕಲ್ಯಾಣಮ್ಮ ಅವರ ಗಂಡ ಎಂದರೆ ಸರಿ. ಅಮ್ಮಯಮ್ಮ ಮತ್ತು ಬೇಬಿ ಅವರ ಮಕ್ಕಳು ಎಂದರೆ ಸರಿ. ಒಂದನೇ ವಾದಿಗೆ ಇಬ್ಬರು ಸಹೋದರರು ಇದ್ದಾರೆ ಹಾಗೂ ನಾಲ್ವರು ಸಹೋದರಿಯರು ಇದ್ದಾರೆ. ನನ್ನ ಸಹೋದರಿಯರು ಸರಳ ಹಾಗೂ ಮಂಜುಳ ಆಗಿರುತ್ತಾರೆ. ನನ್ನ ತಾಯಿ ನಂಜಮ್ಮ ಇದ್ದಾರೆ. ಅವರುಗಳನ್ನು ಈ ಕೇಸಿನಲ್ಲಿ ನಾನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನನ್ನ ತಂಗಿ ಮಾನಸಿಕವಾಗಿ ಅಸ್ವಸ್ಥರಾಗಿರುತ್ತಾರೆ ಹಾಗೂ ನನ್ನ ತಾಯಿಗೆ 85 ವರ್ಷ ವಯಸ್ಸಾಗಿರುವುದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ವಂಶವೃಕ್ಷದಲ್ಲಿ ಮೇಲೆ

ಹೇಳಿದವರನ್ನು ನಮೂದಿಸಿರುವುದಿಲ್ಲ. ವಂಶವೃಕ್ಷವನ್ನು ಪಡೆಯಲು ನಾನು ಯಾರಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ ಎಂದರೆ ನನಗೆ ನೆನಪಿಲ್ಲ.

(ಕೋರಿಕೆ ಮೇರೆಗೆ ಪಾಟಿಸವಾಲನ್ನು ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

**(ಎಂ.ಹೆಚ್.ಶಾಂತ)**
೯ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.